ನಮ್ಮ ಮೊಮ್ಮಗ ಲಂಡನ್‌ನಲ್ಲಿದ್ದಾನೆ, ನಮ್ಮ ಮಗಳ ಮದುವೆ ಕೆನಡಾದಲ್ಲಾಗಿದೆ ಎಂದು ಹೇಳಿದರೆ, ಇದರಿಂದ ಅವರಿಗೇನು ಲಾಭವಿದೆ? ಮಕ್ಕಳು ಸತ್ತ ನಂತರವೂ ತಂದೆ ತಾಯಿಯನ್ನು ನೋಡಲು ಬರುವುದಿಲ್ಲ. ಕಡೇಪಕ್ಷ ನನಗೆ, ನಾನು ಒಂಟಿಯಾಗಿದ್ದೆ, ಒಂಟಿಯಾಗಿದ್ದೇನೆ ಎಂಬ ಸಂತೋಷವಂತೂ ಇರುತ್ತದೆ. ನಮ್ಮವರು ಇದ್ದಾಗ್ಯೂ ಒಂಟಿತನವನ್ನು ಅನುಭವಿಸುವುದಕ್ಕಿಂತ ಇದೇ ಉತ್ತಮ', ನಾನು ಅವಳ ತರ್ಕವನ್ನು ಧ್ವಂಸಗೊಳಿಸುತ್ತಾ ಹೇಳಿದೆ. ಈ ವಾಸ್ತವಿಕತೆಯನ್ನು ಅವಳು ಸಹ ಅಲ್ಲಗಳೆಯಲು ಸಾಧ್ಯವಿರಲಿಲ್ಲ.

ನಾನು ಕೀರ್ತಿಗೆ ಪ್ರೊಫೆಸರ್ ಸರ್ವೇಶರ ಕಥೆಯನ್ನು ಹೇಳಿದೆ. ಋಷಭ್ ನನಗೆ ಪ್ರೊಫೆಸರ್ ಸರ್ವೇಶ್ ಬಗ್ಗೆ ಹೇಳಿದ್ದ. ಅವರು ವಿಶ್ವವಿದ್ಯಾಲಯದಲ್ಲಿ ಜಿಯಾಲಜಿ ವಿಭಾಗದಲ್ಲಿ ಪ್ರಾಧ್ಯಾಪಕರಾಗಿದ್ದರು. ಅವರಿಗೆ ಇಬ್ಬರು ಮಕ್ಕಳಿದ್ದರು. ಒಬ್ಬ ಮಗ, ಒಬ್ಬಳು ಮಗಳು. ಅವರು ಇಬ್ಬರು ಮಕ್ಕಳಿಗೂ ಉಚ್ಚ ಶಿಕ್ಷಣವನ್ನು ಕೊಡಿಸಿದ್ದರು. ಮಗಳು ಫಾರ್ಮಾಸಿಯಲ್ಲಿ ಡಾಕ್ಟರೇಟ್ ಮಾಡಿದ್ದಳು. ಅವಳಿಗೆ ಶಿಕಾಗೋದ ಒಂದು ಔಷಧಿ ಕಂಪನಿಯಲ್ಲಿ ನೌಕರಿ ಸಿಕ್ಕಿತ್ತು. ಅವಳು ಶಿಕಾಗೋದಲ್ಲಿದ್ದ ಭಾರತೀಯ ಯುವಕನನ್ನು ಪ್ರೇಮ ವಿವಾಹವಾಗಿದ್ದಳು. ಅವಳು ಅಲ್ಲಿಯೇ ಶಾಶ್ವತವಾಗಿ ನೆಲೆಸಿದ್ದಳು. ಮಗನಿಗೆ ಸಿಡ್ನಿ, ಆಸ್ಟ್ರೇಲಿಯಾದ ಒಂದು ವಿಶ್ವವಿದ್ಯಾಲಯದಲ್ಲಿ ರಿಸರ್ಚ್ ಡೈರೆಕ್ಟರ್ ಕೆಲಸ ಸಿಕ್ಕಿತು. ಅವನು ಸಿಡ್ನಿಯಲ್ಲಿ ನೆಲೆಸಿದ. ಪ್ರೊಫೆಸರ್ ಸರ್ವೇಶರು ಸೇವೆಯಿಂದ ನಿವೃತ್ತಿಯಾದ ನಂತರ ತಮ್ಮ ಹೆಂಡತಿ ಮತ್ತು ತಮ್ಮ ಓರ್ವ ಮಂದಬುದ್ಧಿಯ ಸಹೋದರನೊಂದಿಗೆ ವಾಸಿಸುತ್ತಿದ್ದರು. ಒಂದು ದಿನ ಪ್ರೊಫೆಸರ್ ಸರ್ವೇಶರು ಹೃದಯಾಘಾತದಿಂದ ನಿಧನರಾದರು. ಒಂದು ತಿಂಗಳೊಳಗೆ ಸಂದಿಗ್ಧ ಪರಿಸ್ಥಿತಿಯಲ್ಲಿ ಅವರ ಹೆಂಡತಿಯೂ ನಿಧನರಾದರು. ಮರು ರಾತ್ರಿ ಅವರ ಮಂದಬುದ್ಧಿ ಸಹೋದರ ಸಹ ನಿಧನನಾದ. ಅವನನ್ನು ನೋಡಿಕೊಳ್ಳುವವರು ಯಾರೂ ಉಳಿದಿರಲಿಲ್ಲ. ಪರಿವಾರದ ಮೂವರು ಸದಸ್ಯರ ಕ್ರಿಯಾಕರ್ಮಗಳನ್ನು ನೆರೆಹೊರೆಯವರು ಕೂಡಿ ಮಾಡಿದರು. ಅವರ ಮಗ ಮತ್ತು ಮಗಳು ಎಲ್ಲಾ ಮುಗಿದ ಒಂದೂವರೆ ತಿಂಗಳ ನಂತರ ಬಂದರು.

ಪ್ರೊಫೆಸರ್ ಸರ್ವೇಶರ ಕಥೆಯನ್ನು ಕೇಳಿ ಕೀರ್ತಿ ಕಂಪಿಸಿದಳು. ಆ ಘಟನೆಯೇ ರೋಮಾಂಚಕಾರಿಯಾಗಿತ್ತು.

'ಈ ಜಗತ್ತು ಗ್ಲೋಬಲ್ ಹಳ್ಳಿಯಾಗಿ ಪರಿವರ್ತನೆಯಾಗಿದೆ, ಆದರೆ ಮನಸ್ಸುಗಳ ನಡುವೆ ಮತ್ತು ಜನರ ನಡುವೆ ಅಂತರಗಳು ಹೆಚ್ಚಿವೆ. ಹಳ್ಳಿಯಲ್ಲಿ ಒಬ್ಬರಿಗೊಬ್ಬರ ಪರಿಚಯವಿರುತ್ತದೆ, ಅವರು ಪರಸ್ಪರರ ಸುಖ ದುಃಖಗಳಲ್ಲಿ ಭಾಗಿಯಾಗುತ್ತಾರೆ. ಆದರೆ ಈ ಗ್ಲೋಬಲ್ ಹಳ್ಳಿಯಲ್ಲಿ ಯಾರುಯಾರಿಗೂ ಪರಿಚಯವಿರುವುದಿಲ್ಲ. ಯಾರುಯಾರನ್ನೂ ಗುರುತಿಸಲೂ ಬಯಸುವುದಿಲ್ಲ. ಪ್ರತಿಯೊಬ್ಬರು ತಮ್ಮ ಮೂಗಿನಿಂದ ಮುಂದಕ್ಕೆ ನೋಡಲು ಬಯಸುವುದಿಲ್ಲ. ಹೀಗಿರುವಾಗ ನಾವು ಯಾವ ಸಂಬಂಧಗಳ ಬಗ್ಗೆ ಮಾತುಗಳನ್ನಾಡುತ್ತೇವೆ?'

'ಚಿಕ್ಕ ಚಿಕ್ಕ ಮಕ್ಕಳಿಗೆ ಶಾಲೆಯಲ್ಲಿ, ಅಮ್ಮ ನಮಗೆ ಅಡುಗೆ ಮಾಡಿ ಉಣಿಸುತ್ತಾಳೆ, ಅಪ್ಪನಿಂದ ನಮಗೆ ಜೇಬು ಖರ್ಚಿಗೆ ಹಣ ಸಿಗುತ್ತದೆ ಎಂಬುದನ್ನು ಬಾಯಿಪಾಠ ಮಾಡಿಸಲಾಗುತ್ತದೆ. ಮಕ್ಕಳು ಸ್ವಲ್ಪ ದೊಡ್ಡವರಾದ ಮೇಲೆ ತಂದೆಯವರು ಕೊಡುವ ದುಡ್ಡಿನಿಂದ ಪಿಜ್ಜಾ, ಬರ್ಗರ್ ಸಹ ಖರೀದಿಸಬಹುದು ಎಂಬುದನ್ನು ತಿಳಿಯುತ್ತಾರೆ. ಮಕ್ಕಳಿಗೆ ತಂದೆಯವರ ಹಣ ಅತ್ಯಂತ ಉಪಯೋಗದ್ದು ಎಂದು ಗೊತ್ತಾಗುತ್ತದೆ. ಮತ್ತೂ ಸ್ವಲ್ಪ ದೊಡ್ಡವರಾದ ಮೇಲೆ ಅಪ್ಪ ಎಲ್ಲೋ ಹಿಂದಕ್ಕೆ ಸರಿಯುತ್ತಾನೆ, ಮಕ್ಕಳು ಹಣದ ಹಿಂದೆ ಓಡುತ್ತಾರೆ.'

'ಸದಾ ಹೀಗೆಯೇ ಆಗುವುದು', ಕೀರ್ತಿ ತನಗೆ ತಾನೇ ಹೇಳಿಕೊಳ್ಳುತ್ತಾಳೆ. ಕೀರ್ತಿ ನನ್ನ ಬಳಿಗೆ ಬಂದಾಗ, ನಾನು ಬಯಸಿಯೂ ರಿತಿಕ್ ಬಗ್ಗೆ ಕೇಳಿರಲಿಲ್ಲ. ನಾನೀಗಲೂ ರಿತಿಕ್ ಬಗ್ಗೆ ಯೋಚಿಸುತ್ತಿದ್ದೇನೆ ಎಂದು ಅವಳು ತಿಳಿದರೆ? ಆದರೆ ಕೀರ್ತಿಯೇ ಅವನ ಬಗ್ಗೆ ನನಗೆ ಹೇಳಿದಳು.

'ಅವನು ಮದುವೆ ಮಾಡಿಕೊಂಡಿದ್ದಾನೆ.'

'ನಾನು ಅವನನ್ನು ಸ್ವತಂತ್ರಗೊಳಿಸಿದ್ದೆ', ನಾನು ಸಾಮಾನ್ಯ ಭಾವನೆಯಿಂದ ಹೇಳಿದೆ. ಆದರೂ ಮನಸ್ಸಿನ ಮೂಲೆಯೊಂದರಲ್ಲಿ ಏನೋ ಕಳಚಿದ ಅನುಭವವಾಯಿತು.

'ಅವಳು ಟೀಚರ್ ಆಗಿದ್ದಾಳೆ, ಸುಂದರವಾಗಿಲ್ಲ, ಆದರೆ ಚೆನ್ನಾಗಿದ್ದಾಳೆ', ಕೀರ್ತಿ ರಿತಿಕ್‌ನ ಹೆಂಡತಿಯ ಬಗ್ಗೆ ಹೇಳಿದಳು.

'ನೀನು ಅವಳನ್ನ ಎಲ್ಲಿ ನೋಡ್ದೆ?'


'ಅವರಿಬ್ಬರು ರೈಟ್ ಟೌನ್‌ಗೆ ಸಾಮಾನುಗಳನ್ನು ಖರೀದಿಸಲು ಬಂದಿದ್ದರು. ರಿತಿಕ್ ನನ್ನನ್ನು ನೋಡಿ, ನನ್ನ ಬಳಿಗೆ ಬಂದ. ಅವನು ನನ್ನಲ್ಲಿ ನಿನ್ನ ಬಗ್ಗೆ ಸಹ ಕೇಳಿದ್ದ'.

'ತನ್ನ ಹೆಂಡತಿಯ ಎದುರೇ?'

'ಅಲ್ಲ! ಆಗ ಅವನ ಹೆಂಡತಿ ಬೇರೊಂದು ಅಂಗಡಿಯಲ್ಲಿದ್ದಳು... ರಿತಿಕ್ ನನ್ನೊಂದಿಗೆ ಮಾತನಾಡುವುದನ್ನು ನೋಡಿ, ಅವಳೂ ಅಲ್ಲಿಗೆ ಬಂದಳು. ರಿತಿಕ್ ಅವಳನ್ನು ನನಗೆ ಪರಿಚಯಿಸಿದ.'

'ಅವನು ತನ್ನ ಹೆಂಡತಿಗೆ ನಿನ್ನ ಪರಿಚಯವನ್ನು ಏನಂತ ಹೇಳಿದ?'

'ನಾನು ಅವನ ಗುತ್ತಿಗೆದಾರ ಗೆಳೆಯನ ಹೆಂಡತಿ ಅಂತ ಹೇಳಿದ'.



'ಅವನಿಷ್ಟೊಂದು ಬದಲಾಗಿದ್ದಾನಾ?' ನನಗೆ ಆಶ್ಚರ್ಯವಾಯಿತು. ಒಂದು ವೇಳೆ ಹೀಗೆ ರಿತಿಕ್‌ನೊಂದಿಗೆ ನನ್ನ ಭೇಟಿಯಾದರೆ, ಅಂದರೆ ಅವನೊಂದಿಗೆ ಅವನ ಹೆಂಡತಿಯಿದ್ದಾಗ ಭೇಟಿಯಾದರೆ ಅವನು ತನ್ನ ಹೆಂಡತಿಗೆ, 'ಇವಳು ಸುಗಂಧಾ, ಇವಳೊಂದಿಗೇ ನಾನಿರುತ್ತಿದ್ದೆ, ನಾವಿಬ್ಬರು ಜೊತೆಯಲ್ಲಿರುತ್ತಿದ್ದೆವು' ಎಂದು ಪರಿಚಯಿಸುತ್ತಾನೆ. ಆದರೆ ಅವನು ನನ್ನ ಗೆಳತಿಯ ಪರಿಚಯವನ್ನು ಸಹ ತನ್ನ ಹೆಂಡತಿಗೆ ಸರಿಯಾಗಿ ಮಾಡಿಕೊಡಲಿಲ್ಲ. ಒಬ್ಬ ವ್ಯಕ್ತಿ ಇಷ್ಟು ಬೇಗೆ ಬದಲಾಗುವನೇ?'

'ನೀನು ನನ್ನ ಬಗ್ಗೆ ಅವನಿಗೇನು ಹೇಳಿದೆ?'

'ನೀನು ಮಜವಾಗಿದ್ದೀಯ, ತುಂಬಾ ಖುಷಿಯಾಗಿದ್ದೀಯ ಎಂದೆ. ಹಾಂ, ಮನೆಯ ಪಾಲುದಾರಿಕೆಯ ವಿಷಯದಲ್ಲಿ ನಿನ್ನನ್ನು ಮರೆಯಬೇಡ ಅಂತ ಸಹ ನೆನಪಿಸಿದೆ' ಎಂದಳು ಕೀರ್ತಿ.

'ಹೋಗ್ಲಿ ಬಿಡು, ನನಗೆ ಆ ನಿರ್ಜೀವ ಮನೆಯ ಪಾಲುಗಾರಿಕೆ ಬೇಡ'.

'ಏಕೆ ಬೇಡ? ಅದಕ್ಕೆ ನೀನು ನಿನ್ನ ಶ್ರಮದ ಹಣ ಸಹ ಹಾಕಿದ್ದೀಯ' ಕೀರ್ತಿ ತರ್ಕಿಸಿದಳು.

'ನೀನು ಹೇಳಿದರೆ ಅವನು ಕೊಡ್ತಾನಾ? ಒಂದೂವರೆ ವರ್ಷವಾಗಿದೆ, ಅವನು ಕೊಡುವವನಾಗಿದ್ದರೆ, ಇಷ್ಟು ಹೊತ್ತಿಗೆ ಕೊಡಬೇಕಿತ್ತು. ನಾನು ಅವನಿಗೆ ನನ್ನ ಪಾಲನ್ನು ವರದಕ್ಷಿಣೆಯಲ್ಲಿ ಕೊಟ್ಟಿದ್ದೇನೆ ಅಂತ ತಿಳೀತೀನಿ' ಎಂದೆ.

'ವಾಹ್! ಇದೊಳ್ಳೆ ಚೆನ್ನಾಗಿದೆ! ನೀನಂತೂ ಅವನನ್ನು ಮದುವೆಯಾಗಲಿಲ್ಲ, ಅವನಿಗೆ ವರದಕ್ಷಿಣೆ ಕೊಟ್ಟುಬಿಟ್ಟೆ! ತುಂಬಾ ಚೆನ್ನಾಗಿದೆ! ನಿನ್ನಂಥ ಹೆಣ್ಣುಗಳೇ ಇದ್ದರೆ, ವರದಕ್ಷಿಣೆ ಪಡೆಯುವವರಿಗೆ ಎಂಥ ಚಾನ್ಸ್...' ಕೀರ್ತಿ ವ್ಯಂಗ್ಯವಾಡಿದಳು.

'ನಾನು ನನ್ನ ಸಂಬಂಧದಲ್ಲಿ ವರದಕ್ಷಿಣೆ ಕೊಡುವ ಬಗ್ಗೆ ಯಾವಾಗ ಹೇಳಿದೆ, ನಾನು ರಿತಿಕ್‌ನ ಮದುವೆಯಲ್ಲಿ, ರಿತಿಕ್ ಪರವಾಗಿ ಅವನ ಹೆಂಡತಿಗೆ ವರದಕ್ಷಿಣೆ ಕೊಡುವ ಬಗ್ಗೆ ಹೇಳ್ತಿದ್ದೇನೆ', ನಾನು ಸಹ ವ್ಯಂಗ್ಯದಿಂದ ಹೇಳಿದೆ.

'ಆಸ್ತಿ ಜಮೀನು ನಗುವ, ತಮಾಷೆಯ ವಿಷಯಗಳಲ್ಲ. ನೀನು ನಿನ್ನ ಅಧಿಕಾರ ಮತ್ತು ಹಕ್ಕನ್ನು ಬಿಟ್ಟುಕೊಡಬಾರದು. ನೀನು ನಿನ್ನ ಅಧಿಕಾರ, ಹಕ್ಕು ಬಿಟ್ಟು ಮಹಾನ್ ಮಹಿಳೆಯಾಗಲ್ಲ, ಬದಲಾಗಿ ಮೂರ್ಖಳಾಗ್ತೀಯ', ಕೀರ್ತಿಗೆ ನನ್ನ ಬಗ್ಗೆ ಸಿಟ್ಟು ಬರುತ್ತಿತ್ತು.

'ಸರಿ ಹೇಳು, ನಾನೇನು ಮಾಡ್ಲಿ? ಅವನ ಎದುರಿಗೆ ನಿಂತು, ನನ್ನ ಪಾಲನ್ನು ನನಗೆ ಮರಳಿ ಕೊಡು, ಇಲ್ಲದಿದ್ರೆ ನಾನು ಕೋರ್ಟಿಗೆ ಹೋಗ್ತೀನಿ ಅಂತ ಹೇಳಲೇ?' ಕೇಳಿದೆ.

'ಇಷ್ಟೆಲ್ಲಾ ಮಾಡುವ ಅವಶ್ಯಕತೆ ಬೀಳದು. ನಾನು ಸದಾಶಿವರೊಂದಿಗೆ ಚರ್ಚಿಸಿದ್ದೆ. ನೀನು ಒಪ್ಪಿಗೆ ಕೊಟ್ಟರೆ ಅವರೆಲ್ಲಾ ಹ್ಯಾಂಡಲ್ ಮಾಡುವುದಾಗಿ ಹೇಳಿದ್ದರು'.

'ಅವರೇನು ಮಾಡ್ತಾರೆ?'